ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ
ತಿಪಟೂರು

ಸಿ.ಸಿ ನಂ. **199/2016**

ಚಾಸಾಃ 14
ಫ್ರಾಸಾಃ 13

ದಿನಾಂಕಃ **07-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | - | ಡಾಃ ಕೆ. ಸುರೇಶ್ |
| ತಂದೆಯ/ಗಂಡನ ಹೆಸರು | - | ಕೆ.ಎಸ್ ಕಾಟಯ್ಯ |
| ವಯಸ್ಸು | - | 55 ವರ್ಷ |
| ಉದ್ಯೋಗ | - | ಹಿರಿಯ ನೇತ್ರ ತಜ್ಞರು |
| ವಾಸ ಸ್ಥಳ | - | ತಿಪಟೂರು |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ನಾನು ಸುಮರು 15 ವರ್ಷಗಳಿಂದ ತಿಪಟೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಹಿರಿಯ ನೇತ್ರ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ 17-12-2015 ರಂದು ರಾತ್ರಿ 9 ಗಂಟೆ ಸಮಯದಲ್ಲಿ ಚಾಸಾ-1 ಮತ್ತು 2 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಬಂದಿರುತ್ತಾರೆ. ನಾನು ಸದರಿಯವರನ್ನು ಉಪಚರಿಸಿ ಕೆಳಕಂಡ ಗಾಯಗಳಿಗೆ ಚಿಕಿತ್ಸೆ ನೀಡಿರುತ್ತೇನೆ. ನಾನು ಸದರಿಯವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

ಚಾಸಾ-1 ರವರನ್ನು ಪರೀಕ್ಷಿಸಲಾಗಿ

1. ಎಡಮೊಣಕೈಯಲ್ಲಿ ನೋವು ಮತ್ತು ಊತ
2. ಹಣೆಯ ಮೇಲ್ಭಾಗದಲ್ಲಿ 1 ಇಂಟು 2 ಸೆ.ಮೀ ತರಚಿದ ಗಾಯ

ನನ್ನ ಅಭಿಪ್ರಾಯದ ಪ್ರಕಾರ ಮೇಲೆ ತಿಳಿಸಿದ ಗಾಗುಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಸಾಕ್ಷಿ ಗಾಯದ ಪ್ರಮಾಣ ಪತ್ರದಲ್ಲಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಚಾಸಾ-2 ರವರನ್ನು ಪರೀಕ್ಷಿಸಲಾಗಿ

1. ಹಣೆಯ ಮೇಲ್ಭಾಗದಲ್ಲಿ 2 ಇಂಟು 1 ಸೆ.ಮೀ ಸೀಳಿದ ಗಾಯ

2. ತಲೆಯ ಹಿಂಭಾಗದಲ್ಲಿ 2 ಇಂಟು 1 ಸೆ.ಮೀ ಸೀಳಿದ ಗಾಯ

ನನ್ನ ಅಭಿಪ್ರಾಯದ ಪ್ರಕಾರ ಮೇಲೆ ತಿಳಿಸಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಸಾಕ್ಷಿ ಗಾಯದ ಪ್ರಮಾಣ ಪತ್ರದಲ್ಲಿ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲು 1 ರಿಂದ ಹೊಡೆದರೆ ಚಾಸಾ-1 ಮತ್ತು 2 ರವರಿಗೆ ಆಗಿರುವಂತಹ ಗಾಯಗಳು ಸಂಭವಿಸುತ್ತವೆ.

ಪಾಟೀ ಸವಾಲು ಶ್ರೀಮತಿ ಯುಡಿಕೆ ವಕೀಲರಿಂದಃ

ಚಾಸಾ-**1** ರವರನ್ನು ಆಸ್ಪತ್ರೆಗೆ ಯಾರು ಕರೆದುಕೊಂಡು ಬಂದಿರುತ್ತಾರೆ ಎಂಬುದನ್ನು ನಾನು ಬರೆದಿರುತ್ತೇನೆ. ನಾನು ಚಾಸಾ-**1** ರವರನ್ನು ಪರೀಕ್ಷೆ ಮಾಡಿರುವ ದಿನಾಂಕಃ **12-11-2015** ಆದರೆ ಅದು ಪ್ರಮಾಣ ಪತ್ರದಲ್ಲಿ ದಿಃ **11-11-2015** ರಂತೆ ಕಾಣುತ್ತದೆ. ಚಾಸಾ-**1** ರವರಿಗೆ ಆಗಿರುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದರೆ ಸರಿ. ಸಾಮಾನ್ಯವಾಗಿ ಒಂದು ಕಲ್ಲಿನ ಮೇಲೆ ಬಿದ್ದರೆ ಚಾಸಾ-**1** ರವರಿಗೆ ಆಗಿರುವಂತಹ ಗಾಯಗಳು ಸಂಭವಿಸಬಹುದು ಎಂದರೆ ಸರಿ. ಅದೇ ರೀತಿ ಚಾಸಾ-**2** ರವರೂ ಸಹ ಒಂದು ಕಲ್ಲಿನ ಮೇಲೆ ಬಿದ್ದರೆ ಈ ರೀತಿ ಗಾಯಗಳು ಆಗಬಹುದು ಎಂದರೆ ಸರಿ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.